


ಟೈಟಾಗಿ, ಲೇಟಾಗಿ ಮನೆಗೆ ಬಂದ ಗುಂಡನನ್ನು ನೋಡಿದ. ಅವನ ಪತ್ನಿ: ಯಾಕ್ರಿ ಇಷ್ಟು ಲೇಟು? ಹೇಳೋವ್ರು, ಕೇಳೋವ್ರು ಯಾರೂ ಇಲ್ಲ ಅನ್ಕಂಡಿದೀರ?

ಗುಂಡ: 'ಖಾಸಗಿತನ ವ್ಯಕ್ತಿಯ ಮೂಲಭೂತ ಹಕ್ಕು' ಅಂತ ಸುಪ್ರೀಂ ಕೋರ್ಟು ಹೇಳಿದೆ, ಗೊತ್ತಾ?

ಪತ್ನಿ: ಮನೇಲಿ ನಾನೇ ಸುಪ್ರೀಂ ಕೋರ್ಟ್ ಅಂತ ಗೊತ್ತು ತಾನೆ?

★★★

ಗುಂಡ: (ಹೆಂಡ್ತಿಗೆ ಫೋನ್‌ನಲ್ಲಿ) ಡಿಯರ್, ಕಾರ್ ಒಳಗೆ ಬಂದೆ, ಆದ್ರೆ ಸ್ಟಿಯರಿಂಗ್ ವೀಲ್, ಕ್ಲಚ್, ಬ್ರೇಕನ್ನೆಲ್ಲಾ ಕದ್ದು ಬಿಟ್ಟಿದ್ದಾರೆ, ಮನೆಗೆ ಹ್ಯಾಗೆ ಬರೋದು?

ಗುಂಡನ ಪತ್ನಿ: ಕುಡಿದು ಟೈಟಾಗಿದ್ದೀರೇನ್ರಿ, ಮತ್ತೆ?

ಗುಂಡ: ಒಂದೇ ಪೆಗ್ಗು ಡಿಯರ್, ಟೈಟೇನಾಗಿಲ್ಲ, ಏನ್ಮಾಡ್ಲಿ? ಅದು ಹೇಳು ಬೇಗ.

ಪತ್ನಿ: ಹಾಗೇ ಪಕ್ಕದ ಸೀಟಿಗೆ ಜರುಗಿ, ಅವೆಲ್ಲಾ ಕೈಗೆ ಕಾಲ್ಗೆ ಸಿಕ್ತಾವೆ.

★★★

ಸರಕನ್ನೆಲ್ಲಾ ಗೋಡೌನಿಗೆ ತುಂಬಿ, ವಿಮೆ ಫಾರಂ ಅನ್ನು ತುಂಬಿ ವಿಮಾ ಕಂಪನಿಯ ಅಧಿಕಾರಿಗೆ ಕೊಟ್ಟ ನಂತರ ಕೇಳಿದ ಗುಂಡ: 'ಒಂದು ವೇಳೆ ಈ ರಾತ್ರಿಯೇ ಗೋಡೌನಿಗೆ ಬೆಂಕಿ ಬಿದ್ದರೆ. ನನಗೆಷ್ಟು ಸಿಕ್ಕುತ್ತದೆ?'

ಅಧಿಕಾರಿ: ಹತ್ತು ವರ್ಷ ಕಠಿಣ ಶಿಕ್ಷೆ!

**(ಸಂಗ್ರಹ) ಹಾಡ್ಯ ಬಿ.ಜಯಾನಂದ, ಮೈಸೂರು**

ಪುಂಡ: ನನ್ನ ಅಂಗಡಿಯ ನಾಲ್ವರು ನೌಕರರು ನಾಳೆಪ್ರೆಸ್ ಕಾನ್ಫರೆನ್ಸ್ ಕರೆದಿದ್ದಾರೆ ಕಣಯ್ಯಾ...

ಗುಂಡ: ಯಾಕೆ?

ಪುಂಡ: 'ನಮ್ಮ ಮಾಲೀಕರು ನಮ್ಮ ಮಾತು ಆಲಿಸುವುದಿಲ್ಲ. ಮತ್ತು ನಮ್ಮನ್ನು ಕ್ಯಾಷ್ ಕೌಂಟರಿನಲ್ಲಿ ಕೂರಲು ಬಿಡುವುದಿಲ್ಲ' ಎನ್ನುವ ಅಹವಾಲು.

ಗುಂಡ: ಅಷ್ಟೇ ತಾನೆ? ಹೇಗಿದ್ದರೂ ನಷ್ಟದಲ್ಲಿರುವ ಆ ಅಂಗಡಿಯನ್ನು ಅವರಿಗೇ ಖರೀದಿಸಲು ಹೇಳಿ ಬಿಡು. ನಂತರ ಕ್ಯಾಷ್ ಕೌಂಟರಿನಲ್ಲಿ ಅವರೇ ಕೂರಬಹುದು ತಾನೆ?

★★★

ಶಾಲಾ ವಾರ್ಷಿಕೋತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗಾಗಿ ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿತ್ತು. 'ನನ್ನ ಅಪ್ಪ ನನಗಾಗಿ ಎಸಗಿದ ಅತ್ಯಂತ ಸಾಹಸಮಯ ಕಾರ್ಯ' ಎನ್ನುವುದು ಸ್ಪರ್ಧೆಯ ವಿಷಯವಾಗಿತ್ತು. ಎಲ್ಲಾ ವಿದ್ಯಾರ್ಥಿಗಳೂ ಚೆನ್ನಾಗಿಯೇ ವಿಷದೀಕರಿಸಿದ್ದರಾದರೂ ಗುಂಡನ ಈ ಕೆಳಗಿನ ಉತ್ತರ ಪ್ರಥಮ ಬಹುಮಾನ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು.

'ನನ್ನ ಅಪ್ಪ ನನ್ನ ಅಮ್ಮನನ್ನು ಮದುವೆಯಾದದ್ದು ಅವರು ನನಗಾಗಿ ಮಾಡಿದ ಅತ್ಯಂತ ಮಹತ್ತರ ಸಾಹಸಮಯ ಕಾರ್ಯವಾಗಿದೆ.'

★★★

ಪತ್ನಿ ಬಾದಾಮಿ ತಿನ್ನುತ್ತಿದ್ದಳು.

ಪತಿ ಕೇಳಿದ, 'ನನಗೂ ರುಚಿ ತೋರಿಸು'

ಆಕೆ ಒಂದು ಬಾದಾಮಿ ನೀಡಿದಳು.

ಆತ ಪುನರುಚ್ಚರಿಸಿದ, 'ಒಂದೇ ಬಾದಾಮಿ?'

ಚಾಣಾಕ್ಷ ಪತ್ನಿ ಉತ್ತರಿಸಿದಳು, 'ಹೌದು ಉಳಿದ ಎಲ್ಲಾ ಬಾದಾಮಿಗಳಿಗೂ ಅದೇ ರುಚಿಯಿದೆ!

★★★

ಪತ್ನೀ ಪೀಡಿತ ಗುಂಡನಿಂದ

ಪತ್ನಿಯಂದಿರಿಗೊಂದು ಕಾಳಜಿ ಪೂರ್ವಕ ಸಲಹೆ!

'ಪತ್ನಿ ಅರ್ಧಾಂಗಿನಿಯಾಗಿರುತ್ತಾಳೆ. ಆದ್ದರಿಂದ ಆಕೆಗೆ ಅರ್ಧ ಮಾಹಿತಿ ಮಾತ್ರ ನೀಡಬೇಕು. ಹೀಗೆ ಮಾಡುವುದರಿಂದ ಜೀವನದ ಅರ್ಧ ಕಷ್ಟಗಳು ಕಡಿಮೆಯಾಗುವವು!'

★★★

ಪುಂಡ: ಶ್ರೀಮಂತ ಮಿತ್ರರ ಜೊತೆ ಸಮಯ ಕಳೆದರೆ ನಾವು ಶ್ರೀಮಂತರಾಗುವುದಿಲ್ಲ. ಹಾಗೆಯೇ ಬುದ್ಧಿವಂತರ ಜೊತೆ ಮಿತ್ರತ್ವ ಬೆಳೆಸಿದರೆ ನಾವು ಬುದ್ಧಿವಂತರಾಗುವುದಿಲ್ಲ. ಆದರೆ ಕುಡುಕರ ಸಹವಾಸ ಮಾಡಿದರೆ ನಾವೇಕೆ ಕುಡುಕರಾಗುತ್ತೇವೆ?

ಗುಂಡ: ಏಕೆಂದರೆ ಶರಾಬು ಶ್ರೀಮಂತ, ಬುದ್ಧಿವಂತರೆನ್ನುವ ಭೇದ ಭಾವವಿಲ್ಲದೆ ಎಲ್ಲರಿಗೂ ಮತ್ತೇರಿಸುತ್ತದೆ!

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**





